Doc-372
T.P-2

(1)

Reg B G 155 ಶ್ರೀ: 15-9-1966

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

SATYAVADI Daily, MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವೆ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮುಷ್ಕರ ಸಂಬಂಧಿಸಿದಂತೆ ಮತ್ತೊಂದು ಸುಗ್ರೀವಾಜ್ಞೆ

ರೈಲ್ವೆ ಸಂಚಾರವನ್ನು ಅಡ್ಡಿ ಮಾಡುವ ಸರ್ವವನ್ನು ಅಪರಾಧವೆಂದು ಪರಿಗಣಿಸುವ ಮತ್ತೊಂದು ಸುಗ್ರೀವಾಜ್ಞೆ ಘೋಷಿಸಲ್ಪಡಲಿದೆ ಎಂದು ನವ ದೆಹಲಿ ವಾರ್ತೆ ತಿಳಿಸುತ್ತದೆ ಭಾರತ ರೈಲ್ವೆ ಶಾಸನವನ್ನು ಈ ಸುಗ್ರೀವಾಜ್ಞೆ ತಿದ್ದುಪಡಿ ಮಾಡುವದು ಈ ತಿಂಗಳು 19 ನೇ ತಾ|| ನಡೆಯಲು ಸೂಚಿತವಾಗಿರುವ ಸಾಂಕೇತಿಕ ಮುಷ್ಕರವನ್ನು ಘೋಷಿತವಾಗಿರುವ ಸುಗ್ರೀವಾಜ್ಞೆ ತಡೆಯುವುದೇ ವಿನಃ ರೈಲು ಸಂಚಾರಕ್ಕೆ ಅಡ್ಡಿ ಆಗ್ಗುವುದನ್ನು ತಡೆಯಲಾರದಾದುದರಿಂದ ಮತ್ತೊಂದು ಸುಗ್ರೀವಾಜ್ಞೆ ಹೊರಡಲಿದೆ ಮಂತ್ರಿ ಮಂಡಲದ ಒಳ ವ್ಯವಹಾರ ಸಮಿತಿ ಇದಕ್ಕೆ ಒಪ್ಪಿರುವುದಾಗಿ ಗೊತ್ತಾಗಿದೆ

★

ಮುಷ್ಕರ ಹೂಡುವುದಿಲ್ಲ

ಭಾರತ ರೈಲ್ವೆ ನೌಕರರ ರಾಷ್ಟ್ರೀಯ ಸಂಘ, ಭಾರತ ರಕ್ಷಣಾ ಕೆಲಸಗಾರರ ರಾಷ್ಟ್ರೀಯ ಸಂಘ ಮತ್ತು ಭಾರತ ಸರ್ಕಾರದ ರಾಷ್ಟ್ರೀಯ ಕೆಲಸಗಾರರ ಸಂಘದವರು 19 ನೇ ತಾ|| ಸಾಂಕೇತಿಕ ಮುಷ್ಕರದಲ್ಲಿ ಭಾಗವಹಿಸುವುದಿಲ್ಲ.

●

ಹೊಸ ತಂತ್ರ

ಕಾರ್ನಾಲಿನಲ್ಲಿರುವ ರಾಷ್ಟ್ರೀಯ ಡೈರಿ ಸಂಶೋಧನಾಲಯದಲ್ಲಿ ಮೊಸರು ಮತ್ತು ಹಾಲಿನ ಉತ್ಪಾದನೆಗಳ ಹೊಸ ಸಂಶೋಧನೆ ಮಾಡಲಾಗಿದೆ

●

ವಿಷಾದ ಸೂಚನೆ

ಶಿವಮೊಗ್ಗ ಹಾಗೂ ನೈಟಿಕ್ ನಗರದಲ್ಲಿ ವಿದ್ಯಾರ್ಥಿಗಳು ಇಳಿದಿರುವ ಕುರಿತು ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ ಷಡಕ್ಷರ ಸ್ವಾಮಿಯವರು ಮಂಡ್ಯದಲ್ಲಿ ನಿನ್ನೆ ಭಾಷಣ ಮಾಡುತ್ತಾ ತಿಳಿಸಿದರು

ಕಳ್ಳತನ

ಸೊರಬ ತಾಲ್ಲೂಕಿನ ಜಡೆ ಗ್ರಾಮದ ಡಾ|| ಎಸ್. ರಾಮಪ್ಪ ಎಂಬವರ ಮನೆಯಲ್ಲಿ ರೂ 20654 ಮೊತ್ತದ ಆಭರಣ ಮತ್ತು ನಗದು ಕಳ್ಳತನವಾಗಿದೆ

★

ದೇಹ ಪತ್ತೆ

ಧರ್ಮಾವರಂನಿಂದ ಬಂದ ಪ್ರವಾಸಿ ಟಿಕೆಟ್ ಪರೀಕ್ಷಕ ನಲವತ್ತು ವಯಸ್ಸಿನ ಚಿನ್ನಂ ಸಾಹೇಬ್ ಎಂಬವರ ದೇಹ ಬೆಂಗಳೂರು ಆರಮನೆ ಆವರಣದ ಷೆಡ್‌ನಲ್ಲಿ ನಿನ್ನೆ ಸಿಕ್ಕಿತು

★

ಫಲಪುಷ್ಪ ಪ್ರದರ್ಶನ

ಈ ತಿಂಗಳು 19 ನೇ ತಾ|| ನಿಂದ ಮೈಸೂರು ಕರ್ಜನ್ ಪಾರ್ಕ್‌ನಲ್ಲಿ ನಡೆಯುವ ಫಲಪುಷ್ಪ ಪ್ರದರ್ಶನದಲ್ಲಿ ಎಂಟು ವಿಧದ ಸ್ಪರ್ಧೆಗಳು ನಡೆಯುವುವು.

ಸರ್ಕಾರಿ ಉದ್ಯಾನಗಳು, ಖಾಸಗಿ ಉದ್ಯಾನಗಳು, ತೋಟಗಾರಿಕೆ ಮತ್ತು ಪೌರಸಭೆ ಇವುಗಳು ಈ ಸ್ಪರ್ಧೆಗಳಲ್ಲಿ ಭಾಗವಹಿಸಬಹುದು.

ಈ ತಿಂಗಳು 19 ನೇ ತಾ|| ಮಧ್ಯಾಹ್ನ 3 ಘಂಟೆಗೆ ಪೌರಸಭೆಯ ಅಧ್ಯಕ್ಷರಾದ ಶ್ರೀ ಬಿ. ಸಿ. ಲಿಂಗಯ್ಯನವರು ಪ್ರದರ್ಶನವನ್ನು ಉದ್ಘಾಟಿಸುವರು. ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷತೆವಹಿಸುವರು.

ಈ ತಿಂಗಳು 21 ನೇ ತಾ|| ಕೈಗಾರಿಕೆ ಮಂತ್ರಿ ಶ್ರೀ ಎಂ. ರಾಜಶೇಖರ ಮೂರ್ತಿಯವರು ಬಹುಮಾನವಿನಿಯೋಗ ಮಾಡುವರು ಸಂಜೆ 5 ಘಂಟೆಗೆ ನಡೆಯುವ ಈ ಸಮಾರಂಭದ ಅಧ್ಯಕ್ಷತೆಯನ್ನು ಕಂದಾಯದ ಮಂತ್ರಿ ಶ್ರೀ ಬಿ ರಾಚಯ್ಯನವರು ವಹಿಸುವರು.

● ಶ್ರೀ ಎ ಜಿ ಬಂದೀಗೌಡರ ನಿಧನದ ಬಗ್ಗೆ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಸಂತಾಪ ಸೂಚಿಸಿದ್ದಾರೆ

ಕ್ರೀಡೋತ್ಸವ ಉದ್ಘಾಟನೆ

ಮೈಸೂರು ವಿಭಾಗದ ಆರು ಜಿಲ್ಲೆಗಳ ದಸರಾ ಮಹೋತ್ಸವದ ಕ್ರೀಡೆಗಳನ್ನು ಮೈಸೂರು ಪುರಸಭೆಯ ಅಧ್ಯಕ್ಷ ಶ್ರೀ ಬಿ. ಸಿ. ಲಿಂಗಯ್ಯನವರು ನಿನ್ನೆ ಮಹಾರಾಜಾ ಕಾಲೇಜು ಕ್ರೀಡಾ ಪ್ರದೇಶದಲ್ಲಿ ಉದ್ಘಾಟಿಸಿದರು. ಪೌರಸಭಾಧ್ಯಕ್ಷರವರು ಮಾರ್ಚ್ ಪಾಸ್ಟ್‌ನಲ್ಲಿ ವಂದನೆ ಸ್ವೀಕರಿಸಿದರು.

ಪುರಸಭಾಧ್ಯಕ್ಷರವರು ಭಾಷಣವನ್ನು ಮಾಡುತ್ತಾ, ಜಾತಿ ಮತ ಭೇದವಿಲ್ಲದ ಕ್ರೀಡೆಗಳಿಗೆ ಹೆಚ್ಚಾದ ಪ್ರೋತ್ಸಾಹ ದೊರೆಯಬೇಕೆಂದೂ, ಅದಕ್ಕಾಗಿಯೇ ಮಂತ್ರಿ ಶಾಖೆಯೊಂದು ರಚಿತವಾಗಬೇಕೆಂದೂ ತಿಳಿಸಿದರು.

ಕ್ರೀಡಾಪಟು ಶ್ರೀ ಅಖಂಡೆಯವರು ಪ್ರಮಾಣವಚನವನ್ನು ಸ್ವೀಕರಿಸಿದರು.

ಒಂದೂವರೆ ಸಾವಿರ ಜನ ಕ್ರೀಡೆಗಳಲ್ಲಿ ಭಾಗವಹಿಸಿರುವರು.

★

ಗೂಳಿ ಹಸುವಾಯಿತು

ಈ ವಾರ್ತೆ ಬಗೋಟಾದಿಂದ ಬಂದಿದೆ. ಸ್ತ್ರೀ ಹಾರ್ಮೋನ್‌ಗಳಿಂದ ಚಿಕಿತ್ಸೆ ನಡೆಸಿ ಗೂಳಿಯೊಂದನ್ನು ಹಸುವನ್ನಾಗಿ ಪರಿವರ್ತನೆಯನ್ನು ಮಾಡಿರುವದಾಗಿ ಸರ್ಕಾರದ ಪ್ರಾಣಿ ವೈದ್ಯರುಗಳು ವರದಿ ಮಾಡಿರುವರು

★

ಶುದ್ಧ ನೀರು ಸರಬರಾಜು

ಮೈಸೂರು ನಗರಕ್ಕೆ ನೀರು ಸರಬರಾಜು ಯೋಜನೆ ಅನ್ವಯ ಕೃಷ್ಣರಾಜ ಸಾಗರದ ಹೊಂಗಳ್ಳಿಯಲ್ಲಿ ನಿರ್ಮಿಸಲಾಗಿರುವ ನೂತನ ಶುದ್ಧೀಕರಣಾಗರನನ್ನು ಕಾರ್ಮಿಕ ಮತ್ತು ನಗರಾಭಿವೃದ್ಧಿತ ಮಂತ್ರಿ ಶ್ರೀ ಕೆ. ಪುಟ್ಟಸ್ವಾಮಿಯವರು ಈ ದಿನ ಬೆಳಿಗ್ಗೆ ಉದ್ಘಾಟಿಸಿದರು. ಪುರಸಭಾಧ್ಯಕ್ಷ ಶ್ರೀ ಬಿ. ಸಿ. ಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಸತ್ಯವಾದಿ ”ಯ ಸ್ವರ್ಣೋತ್ಸವ

“ಸತ್ಯವಾದಿ” ಯ ಸ್ವರ್ಣೋತ್ಸವವನ್ನು ಬೇಗನೇ ನಿರೀಕ್ಷಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ವಿಘ್. ಕೆ ಐರಾನಿಯವರು, ಶ್ರೀ ಮಾಧವ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ. ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯಮೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇನೆ.

ಸಂಪಾದಕ ‘ಸತ್ಯವಾದಿ’
ಚಾಮರಾಜಪುರಂ, ಮೈಸೂರು 4.

★

ಹರಿಜನನ ಕೊಲೆ

ಉಪಾಧ್ಯಾಯರೋರ್ವರಿಂದ ಬಡ್ಡಿಯ ಮೇಲೆ ರೂ. 450 ಪಡೆದು ಅದನ್ನು ತೀರಿಸದ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಅಮರಾಪುರ ಹಳ್ಳಿಯಲ್ಲಿ ಮೂವರು ಓರ್ವ ಹರಿಜನನನ್ನು ಹೊಡೆದು ಗಾಯಗೊಳಿಸಿ ಕೊಂದಿರುವದಾಗಿ ಆಹಸುದಾಬಾದಿನಿಂದ ಬಂದ ವರದಿಯೊಂದು ತಿಳಿಸುತ್ತದೆ.

ಹಿಂದೂಗಳ ಆಚಾರ

ಸಂಗ್ರಾಹಕರು– 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

3 ಹಿಂದುಗಳು ಪ್ರತಿನಿತ್ಯವೂ ಹಣೆಯಲ್ಲಿ ಪುಂಡ್ರಗಳನ್ನು ಧರಿಸಬೇಕು ; ಸರಮಾತ್ಮನ ಪ್ರಸಾದವೆಂದು ಭಾವಿಸಿ, ತಮ್ಮ ಸಂಪ್ರದಾಯಾನುಸಾರಪುಂಡ್ರಗಳನ್ನು ಧರಿಸಬೇಕು; ಅವುಗಳನ್ನು ಧರಿಸುವುದರಿಂದ ಮಂಗಳ (ಶುಚಿ) ವುಂಟಾಗುತ್ತದೆ. ಮಾತಾ, ಪಿತೃಗಳು ವಿಯೋಗಹೊಂದಿದಾಗ ಹತ್ತು ದಿನಗಳ ಕಾಲ ಅಮಂಗಳ (ಅಶುಭ) ಕಾಲವಾದ್ದರಿಂದ ಆಗ್ಗೆ ಮಾತ್ರಾ ಧರಿಸಕೂಡದು.

ಶೈವರು, ವೀರಶೈವರು, ಆಧ್ವೈತಿಗಳು ತ್ರಿಪುಂಡ್ರವನ್ನು ಧರಿಸುತ್ತಾರೆ. ಧರಿಸುವ ಕ್ರಮದಲ್ಲಿ ಸ್ವಲ್ಪ ವ್ಯತ್ಯಾಸಗಳಿರುತ್ತವೆ. ವೈಷ್ಣವರು:(ಮಧ್ವಮತಾನುಯಾಯಿಗಳು) ಶ್ರೀವೈಷ್ಣವರು (ರಮಾನುಜಮತಾನುಯಾಯಿಗಳು) ಭಾಗವತರು, ಬಂಗಾಳೀ ವೈಷ್ಣವರು (ಕೃಷ್ಣಚೈತನ್ಯ ಮತಾನುಯಾಯಿಗಳು) ಜೈನರುಊರ್ಧ್ವ ಪುಂಡ್ರಗಳನ್ನು ಧರಿಸುತ್ತಾರೆ. ಅವರುಗಳಲ್ಲಿ ಧರಿಸುವ ಕ್ರಮ ಮತ್ತು ಪದಾರ್ಥಗಳಲ್ಲಿ ಭಿನ್ನತೆ ಇರುತ್ತದೆ.

ಶ್ಲೋ ॥ ಅಶುಚಿರ್ವಾಪ್ಯನಾಚಾರೋ ಮನಸಾಪಾಪಮಾಚರೆ ।
ಶುಚಿರೇವಭವೇನ್ನಿತ್ಯಂ ಊರ್ಧ್ವಪುಂಡ್ರಾಂಕಿತೋನರಃ ।
ಊರ್ಧ್ವಪುಂಡ್ರಧರೋಮರ್ತ್ಯೋ ವಿಷ್ಣುಯತೇಯತ್ರ ಕುಸ್ರಚಿತ್ ।
ಶ್ವಪಾಕೋಪಿವಿಮಾನಸ್ಥೋ ಮಮ ಲೋಕೇಮಹೀಯತೇ ॥

ಸತ್ಯವ್ರತಃ ॥ ಊರ್ಧ್ವಪುಂಡ್ರೋಜ್ವಲಾದಾಶುಭೋ ಲಲಾಟೇಯಸ್ಯದೃಶ್ಯತೇ ।
ಚಂಡಾಲೋಪಿವಿಶುದ್ಧಾತ್ಮಪೂಜ್ಯಏವನಸಂಶಯಃ ॥

ವಿಷ್ಣುಧರ್ಮೋತ್ತರೇ ॥ ಅಭಿಷಿಕ್ತಂತುಯಚ್ಚೂರ್ಣಂ ವಿಷ್ಣು ಬಿಂಬೇತುಯೋದರಃ।
ಹರಿದ್ರಾಕಾರಯೇನ್ನಿತ್ಯಂಸೋಶ್ವಮೇಧಫಲಂಲಭೇತ್ ॥

Help The Gorakshana

ಗೋವಧೆ ಕೂಡಲೆ ನಿಶೇಧವಾಗಲಿ

Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Cow Slaughter should be banned Immediately

SHAKTI SUDHA

A Superb Tonic

ವುಡ್‌ಲಾಂಡ್ಸ್ 12-9-68 ರಿಂದ

ವೈಭವ ಆರಂಭ

— ಮನಮೋಹಕ ಹಿಂದಿ ಚಿತ್ರ —

ನೀಲ್ ಕಮಲ್ ★ Neel Kamal

ಈಸ್ಟ್‌ಮನ್ ಕಲರ್

.... ಮಿಳಿಮಿಗಟ್ಟಿ ರೂಪಾಯಿನ ಆತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್

ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಿಕಿಲಾ, ಮಹಮೂದ್

ಆಪೆರ— ಜನಪ್ರಿಯ 3 ನೇ ವಾರ

ಚಿತ್ತಾಕರ್ಷ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ

ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳನ್ನೂ ಸಗಟಾಗಿ ದೊರೆಯುತ್ತವೆ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4